ಕಾಫಿ ಮಂಡಲಿಯಂವರು ನಡೆಸುವ ಉಪಾಹಾರ ಗೃಹದಲ್ಲಿ ಕಾಫಿ ದರವನ್ನು ಏರಿಸಿರುವುದು.

ಶ್ರೀ ಜಿ. ನಾರಾಯಣ ಕುಮಾರ್ (ಬಿನ್ನಿಪೇಟೆ).— ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿಧಾನ ಸಭೆಯ ಆವರಣದಲ್ಲಿ ಭಾರತ ಸರ್ಕಾರದ ಕಾಫಿ ಮಂಡಲಿಯವರು ಒಂದು ಉಪಹಾರಗೃಹ ತೆಗೆದಿರುತ್ತಾರೆ. ಸುಮಾರು ೧೫ ದಿನಗಳ ಹಿಂದೆ ಒಂದು ಬಟ್ಟಲು ಕಾಫಿಗೆ ೬೫ ಪೈಸೆ ಇತ್ತು. ಇದ್ದಕ್ಕಿದಂತೆ ಒಂದು ಬಟ್ಟಲು ಕಾಫಿಗೆ ೧ರೂ. ೩೦ ಪೈಸೆಗಳನ್ನು ಏರಿಸಿರುತ್ತಾರೆ. ಶೇಕಡ ೧೦೦ಕ್ಕೆ ೧೦೦ ಹೆಚ್ಚಿಸಿದ್ದಾರೆ.

ಇದರ ಬಗ್ಗೆ ಶಾಸಕರಿಗೆ ಹಾಗೂ ಸಾಮಾನ್ಯ ಜನತೆಗೆ ಮತ್ತು ಪತ್ರಿಕಾಕರ್ತರಿಗೆ ಹೆಚ್ಚಳವಾಗಿರತ್ತದೆ ಇದರ ಬಗ್ಗೆ ಕ್ರಮ ಕೈಗೊಳ್ಳುತ್ತೀರಾ ಎಂದು ಈ ಮೂಲಕ ಕೋರುತ್ತೇನೆ. ಮತ್ತೆ ಆ ಕಡೆಯೂ ಕೂಡ ಉತ್ತಮ ತಿಂಡಿ ತೀರ್ಥ ಕೊಡುತ್ತಾ ಇಲ್ಲ.

ಶ್ರೀ ಸಿ. ಬೈರೇಗೌಡ.— ಅಧ್ಯಕ್ಷರೇ, ಇದು ತಮಗೆ ಸಂಬಂಧಪಟ್ಟ ವಿಷಯ, ತಾವು ತೀರ್ಮಾನ ಮಾಡಿ.

ಅಧ್ಯಕ್ಷರು.— ನಾನು ನೋಡುತ್ತೇನೆ.

5. ವಿತ್ತೀಯ ಕಾರ್ಯಕಲಾಪಗಳು

೧೯೮೭-೮೮ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ

ಶ್ರೀ ಎನ್. ಹೆಚ್. ಗೌಡ (ಕಂವಟ).— ಸನ್ಮಾನ್ಯ ಅಧ್ಯಕ್ಷರೇ, ದಿನಾಂಕ ೨೭-೨-೧೯೮೭ ರಂದು ಕರ್ನಾಟಕ ಮುಖ್ಯ ಮಂತ್ರಿಗಳಾದ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಸದನದಲ್ಲಿ ಮಂಡಿಸಿದ್ದ ಮುಂಗಡ ಪತ್ರವನ್ನು ಸ್ವಾಗತಿಸುತ್ತಾ ನಾಲ್ಕು ಮಾತುಗಳನ್ನು ಆಡಲು ಬಯಸುತ್ತೇನೆ ಈಗಾಗಲೇ ಸದನದ ಹಿರಿಯ, ಕಿರಿಯ ಸದಸ್ಯರುಗಳೆಲ್ಲಾ ಮುಂಗಡ ಪತ್ರದ ಕುರಿತು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದ್ದಾರೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮಂಡಿಸಿದಂಥ ಮುಂಗಡ ಪತ್ರ ಒಂದು ಕಾಲದ ಅಥವಾ ದೇಶದ ಒಂದು ಪರಿಸ್ಥಿತಿಯಿಂದಾಗಿ ಕಟುವಾದ ಟೀಕೆಗೆ ಗುರಿಯಾದಂತೆ ಹೊಗಳಿಕೆಗೂ ಕೂಡ ಗುರಿಯಾಗಿದೆ. ಏನೇ ಇರಲಿ, ಒಂದು ಮುಂಗಡಪತ್ರದ ನಿಜವಾದ ಉದ್ದೇಶ ಏನು ಎನ್ನುವುದು ಕುರಿತು ಸ್ವಲ್ಪ ವಿವೇಚನೆಮಾಡಿ ಹೇಳುವುದಾದರೆ ಇದು ಒಂದು ನಾಡಿನ ಕೆಲವೇ ಜನ ಶ್ರೀಮಂತ ವ್ಯಕ್ತಿಗಳನ್ನು ಅಥವಾ ಕೆಲವೇ ಜನ ಕೈಗಾರಿಕಾ ಕರ್ತೃಗಳನ್ನು ಮತ್ತಷ್ಟು ಶ್ರೀಮಂತರಗೊಳಿಸುವುದು ಅಥವಾ ಆಪರನ್ನು ಆರ್ಥಿಕವಾಗಿ ಮತ್ತಷ್ಟು ಗಟ್ಟಿಗರನ್ನಾಗಿ ಮಾಡುವುದಲ್ಲ. ಮುಂಗಡಪತ್ರದ ಉದ್ದೇಶ, ಒಂದು ನಾಡಿನ ಅಥವಾ ಒಂದು ರಾಜ್ಯದ ಜನತೆಯ ಸಮಗ್ರವಾದಂಥ ಒಂದು ಅಭಿವೃದ್ಧಿಯನ್ನು ಸಾಧಿಸುವುದು. ಈ ದೃಷ್ಟಿಯಿಂದ ವಿಚಾರ ಮಾಡುವಾಗ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮಂಡಿಸಿದಂಥ ಈ ಸಲದ ಮುಂಗಡ ಪತ್ರ ಜನತೆಯ ಅಭಿವೃದ್ಧಿಯನ್ನು ಸಾಧಿಸುವತ್ತ ಹೆಜ್ಜೆ ಇಟ್ಟಿದೆ, ಅದು ಸಾಮಾನ್ಯ ಜನತೆಯ ಮುಂಗಡ ಪತ್ರವಾಗಿದೆ ಎಂದು ನಾನು ನಿಜಕ್ಕೂ ಹೆಮ್ಮೆಯಿಂದ ಹೇಳಬಲ್ಲೆ. ಒಂದು ಯೋಗಾಯೋಗ ಏನೆಂದರೆ ಈ ಸಲ ಮುಂಗಡ ಪತ್ರ ಯಾವದಿನ ಚರ್ಚೆಗೆ ಬಂತೋ ಅದೇ ದಿನ ನಮ್ಮ ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ ಸ್ಥಾಪಿತವಾದಂಥ ಮಂಡಲ ಪಂಚಾಯ್ತಿಗಳು ಕೂಡಾ ಆಡಳಿತದಲ್ಲಿ ಬರುತ್ತವೆ, ಇದೊಂದು ಯೋಗ ಯೋಗವೆಂದು ಹೇಳಬೇಕಾಗುತ್ತದೆ ಇದರಿಂದ ಈ ಸಲದ ಮುಂಗಡ ಪತ್ರಕ್ಕೂ, ಗ್ರಾಮೀಣ ಜನತೆಯ ಜೀವನಕ್ಕೂ ಅಷ್ಟೊಂದು ನಿಕಟ ಸಂಬಂಧ ಇದೆ ಎನ್ನುವುದು ಗೊತ್ತಾಗುತ್ತದೆ ಕೇವಲ ಅಧಿಕಾರ ವಿಕೇಂದ್ರೀಕರಣ ಮಾತ್ರ ನಮ್ಮ ಸರ್ಕಾರದ ಉದ್ದೇಶವಲ್ಲ, ಗ್ರಾಮೀಣ ಜನತೆಯ ಸರ್ವಾಂಗೀಣ ಪ್ರಗತಿಯೂ ಕೂಡ ನಮ್ಮ ಉದ್ದೇಶ ಎಂಬುದನ್ನು ಗಮನದಲ್ಲಿ ಇಟ್ಟುಕೊಂಡಂಥ ನಮ್ಮ ಮುಖ್ಯ ಮಂತ್ರಿಗಳು ಅದೇದಿನ ಗ್ರಾಮೀಣ ಜನತೆಯ ಅಭಿವೃದ್ಧಿಗಾಗಿ, ಅವರ ಆಡಳಿತಕ್ಕಾಗಿ ಸುಮಾರು ೬೫೦ ಕೋಟಿ ರೂಪಾಯಿಗಳನ್ನು ಮಂಡಲ ಪಂಚಾಯ್ತಿಗಳಿಗೆ ಮೀಸಲಿಟ್ಟಿದ್ದಾರೆನ್ನುವುದನ್ನು ನೋಡಿದಾಗ ನಿಜವಾಗಿಯೂ ಕೂಡ ಯಾವ ಮಾತಿನಿಂದ ಸರ್ಕಾರ ಹೇಳಿತ್ತೋ, ಆ ಒಂದು ಮಾತನ್ನು ಕಾರ್ಯಗತ ಮಾಡಲಿಕ್ಕಾಗಿ ದಿಟ್ಟ ಹೆಜ್ಜೆಯನ್ನಿಟ್ಟಿದೆ. ಎರಡನೆಯದಾಗಿ, ಈ ಸಾಲಿನ ಮುಂಗಡ ಪತ್ರ ಪಕ್ಕಲಿಗರ ಜೀವನಕ್ಕೆ ಸಂಬಂಧಪಟ್ಟಂತೆ ಇದೆ. ಪಕ್ಕಲುತನವನ್ನು ಪ್ರಗತಿಯಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಮುಂಗಡ ಪತ್ರ